# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಜಿಎಂ-4088/2015/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 12/06/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ಕೃಷ್ಣ ಬಾಬು ಸುತಾರ ಅನಂತಪುರ ಗ್ರಾಮ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ಕೃಷ್ಣ ಬಾಬು ಸುತಾರ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ಬೆಳಗಾವಿ ಜಿಲ್ಲೆ, ಅಥಣಿ ತಾಲ್ಲೂಕಿನ ಅನಂತಪುರ ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮ ಠಾಣಾ ಜಾಗವು ಅನಂತಪುರ ಬಸ್ ನಿಲ್ದಾಣದ ಸುತ್ತಮುತ್ತಲೂ ಇದ್ದು, ಸದರಿ ಜಾಗವನ್ನು ಅನೇಕ ಜನರ ಹೆಸರಿನಲ್ಲಿ ನೋಂದಾಯಿಸಲಾಗಿದೆ. ಅದು ಯಾರ ಯಾರ ಹೆಸರಿನಲ್ಲಿ ನೋಂದಾಯಿಸಲಾಗಿದೆ ಎಂಬ ಬಗ್ಗೆ ಮಾಹಿತಿ ಕೋರಿ ಅನಂತರಪುರ ಗ್ರಾಮ ಪಂಚಾಯತಿಗೆ ಮಾಹಿತಿ ಹಕ್ಕು ಅಧಿನಿಯಮದಡಿ ಅರ್ಜಿ ಸಲ್ಲಿಸಿ ಮಾಹಿತಿ ಕೋರಲಾಗಿದ್ದು, ಸದರಿ ಗ್ರಾಮ ಪಂಚಾಯತಿಯ ಎದುರುದಾರರು ಸುಳ್ಳು ಮತ್ತು ಅಪೂರ್ಣ ಮಾಹಿತಿಯನ್ನು ನೀಡಿರುತ್ತಾರೆ. ಆಸ್ತಿ ನಂಬರ್‌ಗಳಾದ 1010, 1011, 1099 ಮತ್ತು 1012/ಅ ಮತ್ತು ಇನ್ನಿತರೆ ಆಸ್ತಿಗಳ ನೊಂದಣಿಯಲ್ಲಿ ಬಾರಿ ಅವ್ಯವಹಾರಗಳಾಗಿರುತ್ತವೆ. ಎದುರುದಾರರು ತಮಗೆ ಬೇಕಾದವರಿಗೆ ಮಾತ್ರ ಪಂಚಾಯತಿ ಕೆಲಸ ಮಾಡಿಕೊಡುತ್ತಾರೆ. ಆದರೆ, ತಮ್ಮಂತಹವರಿಗೆ ಕೆಲಸ ಮಾಡಿಕೊಡುವುದಿಲ್ಲ. ಆದ್ದರಿಂದ, ಈ ಅವ್ಯವಹಾರದ ಬಗ್ಗೆ ತನಿಖೆ ನಡೆಸಬೇಕೆಂದು ಕೋರಿದ್ದಾಗಿರುತ್ತದೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, 2ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. 1ನೇ ಎದುರುದಾರರ ಹುದ್ದೆ ಖಾಲಿ ಇರುವುದಾಗಿ ತಿಳಿಸಲಾಗಿದೆ.

3. 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರು ತಿಳಿಸಿದಂತೆ ಗ್ರಾಮಠಾಣಾ ಆಸ್ತಿಗಳ ಪೈಕಿ ವಿಪಿಸಿ ನಂಬರ್ 1010ರ ಆಸ್ತಿ ಶ್ರೀ ಚಂದ್ರಶೇಖರ್ ಸಿದ್ದಪ್ಪ ಉತ್ಸಾಹಿ ಇವರ ಹೆಸರಿನಲ್ಲಿ ಇದ್ದು, ಸದರಿಯವರು 15 ವರ್ಷಗಳಿಂದ ಮನೆ ನಿರ್ಮಿಸಿಕೊಂಡು ವಾಸವಾಗಿರುತ್ತಾರೆಂದು, ಹಾಗೆಯೇ ವಿಪಿಸಿ ನಂಬರ್ 1011 ರಲ್ಲಿ ಶ್ರೀ ಸಂಗಪ್ಪ ಶಿವಪ್ಪ ಜಾಬಗೌಡರ ಇವರು 15 ವರ್ಷಗಳಿಂದ ಮನೆಯನ್ನು ನಿರ್ಮಿಸಿಕೊಂಡು ವಾಸವಾಗಿರುತ್ತಾರೆಂದು, ಹಾಗೆಯೇ ವಿಪಿಸಿ ನಂಬರ್ 1099ರ ಜಾಗದಲ್ಲಿ ಶ್ರೀ ಅನಿಲ್ ಅಪ್ಪಸಾಬ ಪಾಟೀಲ ಇವರು 10 ವರ್ಷಗಳಿಂದ ಮನೆ ನಿರ್ಮಿಸಿಕೊಂಡು ವಾಸವಾಗಿರುತ್ತಾರೆಂದು, ವಿಪಿಸಿ ನಂಬರ್ 1012/ಅ ದಲ್ಲಿನ ಜಾಗದಲ್ಲಿ ಶ್ರೀಮತಿ ನೀಲವ್ವ ರಾಮು ಈರಳ್ಳಿ ಇವರು 10 ವರ್ಷಗಳಿಂದ ಮನೆ ನಿರ್ಮಿಸಿಕೊಂಡಿರುತ್ತಾರೆಂದು, ಗ್ರಾಮಠಾಣ ವ್ಯಾಪ್ತಿಯಲ್ಲಿ ಅವ್ಯವಹಾರ ನಡೆದಿದೆ ಎಂಬ ದೂರು ಸುಳ್ಳಿನಿಂದ ಕೂಡಿರುತ್ತದೆ. ಗ್ರಾಮ ಪಂಚಾಯತಿಯಲ್ಲಿ ತಮಗೆ ಬೇಕಾದವರಿಗೆ ಕೆಲಸ ಮಾಡಿಕೊಡಲಾಗುತ್ತಿದೆ ಎಂದು ಮಾಡಿರುವ ಆರೋಪವು ಸುಳ್ಳಿನಿಂದ ಕೂಡಿರುತ್ತದೆ. ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ, ಅಥಣಿ ಇವರು ಈಗಾಗಲೇ ವಿಚಾರಣೆ ಕೈಗೊಂಡು ವಿಚಾರಣಾ ಕಾಲದಲ್ಲಿ ಹಾಜರಿದ್ದ ಸಾರ್ವಜನಿಕರು ಹಾಗೂ ಸದಸ್ಯರು ಸಹ ಅವ್ಯವಹಾರ ನಡೆದಿದೆ ಎನ್ನುವ ಅಂಶವನ್ನು ನಿರಾಕರಿಸಿರುತ್ತಾರೆ.

4. ಈ ಹಂತದಲ್ಲಿ ಪ್ರಕರಣದ ತನಿಖೆಯನ್ನು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಅಥಣಿ ಇವರಿಗೆ ವಹಿಸಿದ್ದು, ಸದರಿಯವರು ವರದಿಯನ್ನು ಸಲ್ಲಿಸಿ, 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಸಲ್ಲಿಸಿರುವ ಉತ್ತರವನ್ನು ತಮ್ಮ ವರದಿಯಲ್ಲಿ ಪುನರುಚ್ಚರಿಸಿರುತ್ತಾರೆ.

5. ಸದರಿ ವರದಿಯ ಆಧಾರದ ಮೇಲೆ ದೂರುದಾರರ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿ, ಕಾರ್ಯನಿರ್ವಾಹಕ ಅಧಿಕಾರಿಯವರು ನೀಡಿರುವ ವರದಿಯು ವಾಸ್ತವಾಂಶಗಳಿಂದ ಕೂಡಿರುವುದಿಲ್ಲ. ಅವರು ಕೈಗೊಂಡ ತನಿಖೆಯು ದೂರುದಾರರ ಅನುಪಸ್ಥಿತಿಯಲ್ಲಿ ಕೈಗೊಳ್ಳಲಾಗಿರುತ್ತದೆ. ಸ್ಥಳ ತನಿಖೆಯ ಬಗ್ಗೆ ದೂರುದಾರರಿಗೆ ಯಾವುದೇ ನೋಟೀಸ್ ನೀಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಆದ್ದರಿಂದ, ಈ ಹಂತದಲ್ಲಿ ಬೆಳಗಾವಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಂದ ವರದಿ ಪಡೆಯಲು ಆದೇಶಿಸಲಾಗಿದ್ದು, ಸದರಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಪ್ರಕರಣದ ತನಿಖೆಯನ್ನು ಕೈಗೊಂಡು ವರದಿ ಸಲ್ಲಿಸಲು ಅಥಣಿಯ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಸೂಚಿಸಿದ್ದು, ಅವರು ವರದಿಯನ್ನು ಸಲ್ಲಿಸಿರುತ್ತಾರೆ. ಕಾರ್ಯನಿರ್ವಾಹಕ ಅಧಿಕಾರಿಯವರು ತಮ್ಮ ವರದಿಯಲ್ಲಿ ದೂರುದಾರರ ಸಮಕ್ಷಮ ದಿ:23/02/2017 ರಂದು ಅನಂತಪೂರ ಗ್ರಾಮಕ್ಕೆ ಭೇಟಿ ಕೊಟ್ಟು ಪರಿಶೀಲನಾ ಕಾರ್ಯವನ್ನು ಕೈಗೊಳ್ಳಲಾಗಿದ್ದು, ಸದರಿ ಅವಧಿಯಲ್ಲಿ ಗ್ರಾಮ ಪಂಚಾಯತಿ ಕಟ್ಟಡದ ಹಾಗೂ ಸರ್ಕಾರಿ ಪ್ರಾಥಮಿಕ

ಶಾಲೆ ಸುತ್ತಮುತ್ತಲೂ ಇರುವ ಗ್ರಾಮಠಾಣಾ ಜಾಗವನ್ನು ಹಿಂದಿನ ಮಂಡಲ ಪಂಚಾಯತಿಯವರು ಜನರಿಗೆ ವಿತರಿಸಿರುತ್ತಾರೆ. ಇದರಲ್ಲಿ ಈಗಾಗಲೇ ಶೇಕಡ 75ಕ್ಕಿಂತಲೂ ಹೆಚ್ಚಿನ ಜನರು ಕಟ್ಟಡಗಳನ್ನು ನಿರ್ಮಿಸಿಕೊಂಡಿರುತ್ತಾರೆ. ಗ್ರಾಮಠಾಣಾ ಜಾಗೆಯಲ್ಲಿ ನಿವೇಶನ/ಕಟ್ಟಡ ನಿರ್ಮಿಸಿಕೊಂಡಿರುವವರ ಯಾದಿಯನ್ನು ಮತ್ತು ಬಾವಚಿತ್ರವನ್ನು/ಕರಬೇಡಿಕೆ ಪ್ರಪತ್ರದ ಪ್ರತಿಗಳನ್ನು ಪಡೆದು ತಮ್ಮ ವರದಿಗೆ ಅಡಕ ಮಾಡಿರುವುದಾಗಿ ತಿಳಿಸಿರುತ್ತಾರೆ.

6. ದೂರಿನಂಶಗಳನ್ನು ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯನ್ನು, ತನಿಖಾ ವರದಿಯನ್ನು ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಅನಂತಪೂರ ಗ್ರಾಮದ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಗ್ರಾಮಠಾಣಾ ಜಾಗದಲ್ಲಿ ಅನೇಕ ಮನೆಗಳು, ಶಾಲೆಯ ಕಟ್ಟಡ, ವಾಣಿಜ್ಯ ಕಟ್ಟಡಗಳನ್ನು ಕಟ್ಟಿರುವುದು ಸ್ಪಷ್ಟ ಪಡುತ್ತದೆ. ಈ ಬಗ್ಗೆ ತನಿಖಾಧಿಕಾರಿಯಾದ ಅಥಣಿ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯವರು ವರದಿಯೊಂದಿಗೆ ಸಲ್ಲಿಸಿರುವ ಯಾದಿ ಪ್ರತಿಯನ್ನು ಪರಿಶೀಲಿಸಿದಲ್ಲಿ, ಗ್ರಾಮಠಾಣಾ ಜಾಗದಲ್ಲಿ ನಿವೇಶನ ಪಡೆದ ವ್ಯಕ್ತಿಗಳ ಪಟ್ಟಿಯಲ್ಲಿ ಸುಮಾರು 49 ವ್ಯಕ್ತಿಗಳು ನಿವೇಶನವನ್ನು ಪಡೆದಿರುವುದು ಕಂಡು ಬರುತ್ತದೆ. ಸದರಿ ವ್ಯಕ್ತಿಗಳಲ್ಲಿ ಕೆಲವರು ವಾಸದ ಮನೆಗಳನ್ನು ಕಟ್ಟಿಕೊಂಡಿದ್ದರೆ, ಕೆಲವರು ವಾಣಿಜ್ಯ ಕಟ್ಟಡವನ್ನು ಕಟ್ಟಿರುವುದು ಕಂಡು ಬರುತ್ತದೆ. ಇದಲ್ಲದೇ, ಸದರಿ ವ್ಯಕ್ತಿಗಳಿಗೆ ನಿವೇಶನಗಳನ್ನು 1987 ರಲ್ಲೇ ಮಂಜೂರು ಮಾಡಿರುವುದಾಗಿ ಸದರಿ ಪಟ್ಟಿಯಲ್ಲಿ ತೋರಿಸಲಾಗಿದೆ (ಸದರಿ ಪಟ್ಟಿಯನ್ನು ಹಾಜರುಪಡಿಸಲಾಗಿದೆ). (ಸದರಿ ನಿವೇಶನ/ಕಟ್ಟಡಗಳಿಗೆ ಸಂಬಂಧಿಸಿದ ಕರ ಆಕರಣೆ ಯಾದಿಯ ಪ್ರತಿಗಳನ್ನು ಹಾಜರುಪಡಿಸಲಾಗಿದೆ). ಆದರೆ, ಈ ನಿವೇಶನಗಳು ಹಂಚಿಕೆಯಾದ ಬಗ್ಗೆ ಹಕ್ಕು ಪತ್ರಗಳ ಪ್ರತಿಗಳನ್ನು ಹಾಜರುಪಡಿಸಿರುವುದಿಲ್ಲ. ಈ ಬಗ್ಗೆ ಸಹಾಯಕ ನಿರ್ದೇಶಕರು (ಗ್ರಾಉ) (ಪ್ರಭಾರಿ) ತಾಲ್ಲೂಕು ಪಂಚಾಯತಿ, ಅಥಣಿ ಇವರು ದೂರಿಗೆ ಸಂಬಂಧಿಸಿದಂತೆ ಗ್ರಾಮಠಾಣಾ ಆಸ್ತಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿ, ಸದರಿ ಆಸ್ತಿಗಳನ್ನು ಸರ್ಕಾರದಿಂದ ನೀಡಿರುವ ಹಕ್ಕು ಪತ್ರ ಪ್ರಕಾರ ದಾಖಲಾಗಿರುವ ಬಗ್ಗೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ಮಾಹಿತಿ ನೀಡಿರುತ್ತಾರೆ. ಆದರೆ, ಸಂಬಂಧಪಟ್ಟ ಹಕ್ಕುಪತ್ರ ಹಾಗೂ ಠರಾವು ಪತ್ರ ಪರಿಶೀಲನೆಗೆ ಲಭ್ಯವಾಗಿಲ್ಲವೆಂದು ತಿಳಿಸಿ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಅಥಣಿ ರವರಿಗೆ ವರದಿ ಮಾಡಿರುವುದು ಕಂಡು ಬಂದಿರುತ್ತದೆ (ಸದರಿ ವರದಿಯನ್ನು ಹಾಜರುಪಡಿಸಲಾಗಿದೆ). ಕ್ರ.ಸಂ.48 ರಲ್ಲಿ ಇರುವ ಆಸ್ತಿ ಸಂ:1167 ಅನ್ನು ಸಹಕಾರಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ ಇವರಿಗೆ 2013 ರಲ್ಲಿ ನೀಡಿರುವುದಾಗಿ ಕಂಡು ಬರುತ್ತದೆ. ಕ್ರ.ಸಂ.49ರಲ್ಲಿ ಇರುವ ಆಸ್ತಿ ಸಂ:719/ಇ ಯ ಜಾಗವನ್ನು 2016 ರಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ತೆರೆಯಲು ನೀಡಿರುವುದು ಕಂಡು ಬರುತ್ತದೆ. ಆದರೆ, 1987 ರಲ್ಲಿ

ಹಂಚಿಕೆ ಮಾಡಲಾಗಿದೆ ಎಂದು ಹೇಳಲಾದ ನಿವೇಶನಗಳ ಬಗ್ಗೆ ಯಾವುದೇ ಹಕ್ಕು ಪತ್ರಗಳು ಅಥವಾ ಹಿಂದಿನ ಮಂಡಲ ಪಂಚಾಯತಿಯ ಠರಾವು ಇಲ್ಲದೇ ಇರುವುದು ಸ್ಪಷ್ಟ ಪಡುತ್ತದೆ.

7. ಆದರೆ, ಅಥಣಿ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಣಾಧಿಕಾರಿಯವರು ನೀಡಿರುವ ವರದಿಯನ್ನು ಪರಿಶೀಲಿಸಿದಲ್ಲಿ, ಗ್ರಾಮಠಾಣಾ ಜಾಗದಲ್ಲಿ ಈಗಾಗಲೇ ಮೇಲೆ ಹೇಳಿದ 47 ವ್ಯಕ್ತಿಗಳು ಕಟ್ಟಡ ಕಟ್ಟಿಕೊಂಡು ಸುಪರ್ದಿನಲ್ಲಿರುವುದು ವೇದ್ಯವಾಗುತ್ತದೆ. ಸದರಿ ವ್ಯಕ್ತಿಗಳು ಸದರಿ ಜಾಗದಲ್ಲಿ ಅಧಿಕೃತವಾಗಿ/ಅನಧೀಕೃತವಾಗಿ ಇರುವ ಬಗ್ಗೆ ಸಂಬಂಧಿಸಿದ ಪಂಚಾಯತಿ ದಾಖಲೆಗಳನ್ನು ಪರಿಶೀಲಿಸಿ ದೃಢಪಡಿಸಿಕೊಳ್ಳಬೇಕಾಗುತ್ತದೆ. ಆದ್ದರಿಂದ, ಮೇಲೆ ಹೇಳಿದ 47 ಆಸ್ತಿಗಳಲ್ಲಿ ಇರುವ ವ್ಯಕ್ತಿಗಳಿಂದ ಸದರಿ ಆಸ್ತಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು (ಹಕ್ಕು ಪತ್ರ) ಪಡೆದು ಸದರಿ ವ್ಯಕ್ತಿಗಳು ಅನಧೀಕೃತ ಸುಪರ್ದಿನಲ್ಲಿ ಇರುತ್ತಾರೋ ಅಥವಾ ಇಲ್ಲವೋ ಎಂಬುದನ್ನು ಪರಿಗಣಿಸಿ ನಂತರ ಅನಧೀಕೃತ ಸುಪರ್ದಿನಲ್ಲಿ ಇದ್ದಲ್ಲಿ ಅಂತಹ ಆಸ್ತಿಗಳನ್ನು ಗ್ರಾಮ ಪಂಚಾಯತಿಯ ವಶಕ್ಕೆ ಪಡೆಯಬಹುದಾಗಿರುತ್ತದೆ.

8. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಮೇಲೆ ತಿಳಿಸಿದಂತೆ ಬೆಳಗಾವಿ ಜಿಲ್ಲೆ, ಅಥಣಿ ತಾಲ್ಲೂಕಿನ, ಅನಂತಪುರ ಗ್ರಾಮ ಪಂಚಾಯತಿಯವರು ಕ್ರಮ ಕೈಗೊಂಡು ಅನಧೀಕೃತ ಸುಪರ್ದಿನಲ್ಲಿ ಇರುವ ಆಸ್ತಿಗಳನ್ನು ನ್ಯಾಯಯುತವಾಗಿ ಗ್ರಾಮ ಪಂಚಾಯತಿ ವಶಕ್ಕೆ ಪಡೆಯಲು ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ ಎರಡು ತಿಂಗಳೊಳಗೆ ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Ananda 12/6

**(ನ್ಯಾಯಮೂರ್ತಿ ಎನ್. ಆನಂದ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.**